# ಕಾರಂತರ ಕಾದಂಬರಿಗಳಲ್ಲಿ ಮಣ್ಣು ಮತ್ತು ಮನುಷ್ಯ

**ಡಾ. ಎಚ್. ಎಲ್. ರವೀಂದ್ರ**
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ
ಶ್ರೀ ಕುವೆಂಪು ಮಹಾವಿದ್ಯಾಲಯ ಪ್ರಥಮ ದರ್ಜೆ ಕಾಲೇಜು
ಕೆಂಗಲ್, ಚನ್ನಪಟ್ಟಣ ತಾ, ರಾಮನಗರ ಜಿಲ್ಲೆ–562 161.

**Article Link: https://aksharasurya.com/2023/07/ravindra-h-l/**

ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶಿವರಾಮ ಕಾರಂತರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಕನ್ನಡ ಸಾಹಿತ್ಯ ಲೋಕದ ವಿವಿಧ ಪ್ರಕಾರಗಳಲ್ಲಿ ವಿಸ್ಮಯಗೊಳಿಸುವ, ವಿಪುಲ ಸಾಹಿತ್ಯವನ್ನು ಸೃಷ್ಟಿಸಿದ ಬಹುಜ್ಞ ಲೇಖಕರು. ಅವರನ್ನು ಕೇವಲ ಲೇಖಕರು ಎಂದು ಕರೆಯುವುದಕ್ಕಿಂತ, ಬಹುಮುಖ ಪ್ರತಿಭೆಯ ಕಲಾಕಾರರು ಎಂದು ಕರೆಯುವುದು ಹೆಚ್ಚು ಸೂಕ್ತವೆನಿಸುತ್ತದೆ. "ಕಾದಂಬರಿಕಾರರಾಗಿ ಕಾರಂತರು" ಎಂಬುದನ್ನು ಹೊರತುಪಡಿಸಿ, ಕಾರಂತರ ಇತರ ಆಯಾಮಗಳನ್ನು ಗುರುತಿಸಿ ಹೇಳುವುದಾದರೆ "ಯಕ್ಷಗಾನ ಪರಿಷ್ಕಾರಕ ಕಾರಂತ, ಸಣ್ಣ ಕಥೆಗಾರ ಕಾರಂತ, ನಾಟಕಕಾರ ಕಾರಂತ, ಕಲಾವಿಮರ್ಶಕ ಕಾರಂತ, ವಿಜ್ಞಾನ ಗ್ರಂಥ ಕರ್ತೃ ಕಾರಂತ, ವಿದ್ಯಾ ಕ್ಷೇತ್ರದಲ್ಲಿ ಪ್ರಯೋಗಕಾರ ಕಾರಂತ" ಹೀಗೆ ಇವರ ಕಾರ್ಯಕ್ಷೇತ್ರ ವಿಸ್ತಾರವಾದುದು. ಜೀವನಾನುಭವವನ್ನು ವಿಸ್ತರಿಸಿಕೊಳ್ಳಬೇಕೆಂಬ ಅವರ ಸತತ ಪ್ರಯತ್ನ ಶ್ರದ್ಧಾಪೂರ್ಣವಾದುದು. ಕಾರಂತರು ಎಲ್ಲಾ ಕ್ಷೇತ್ರದಲ್ಲೂ ಅನುಭವದ ಅಗ್ನಿಪರೀಕ್ಷೆಯಲ್ಲಿ ಗೆಲ್ಲದ ಯಾವುದೂ ಸತ್ಯವಲ್ಲ ಎಂದು ನಂಬಿ, ಬದುಕಿನ ಅತ್ಯಂತ ನಿಷ್ಠೂರ ಪರೀಕ್ಷೆಗಳಿಗೆ ತಮ್ಮನ್ನು ತಾವೇ ಒಡ್ಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ "ಆಡು ಮುಟ್ಟದ ಸೊಪ್ಪಿಲ್ಲ ಕಾರಂತರು ಕೈಯಾಡಿಸದ ಕ್ಷೇತ್ರವಿಲ್ಲ" ಎಂಬ ಜನಜನಿತವಾದ ಮಾತನ್ನು ಒಪ್ಪತಕ್ಕದ್ದಾಗಿದೆ.

ಈ ಲೇಖನದ ಉದ್ದೇಶ ಡಾ॥ ಕೆ.ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಮನುಷ್ಯನ ಜೊತೆಗೆ ಅವರ ಕಾದಂಬರಿಗಳಲ್ಲಿ ಬಂದಿರುವ ನಿಸರ್ಗವನ್ನು ಪ್ರಧಾನವಾಗಿ ವಿವೇಚಿಸುವುದು. ಮಾನವ–ಸಮಾಜದ ಬಗೆಗೆ ಕಾರಂತರ ನೋಟ ನಿಲುವುಗಳನ್ನು ಅರ್ಥ ಮಾಡಿಕೊಳ್ಳುವ ನೆಲೆಯು ಈ ಲೇಖನದ ಸಮಗ್ರತೆಯ ದೃಷ್ಟಿಯಿಂದ ಮುಖ್ಯವಾಗುತ್ತದೆ. ಸಾಮಾಜಿಕ ಸಮಸ್ಯೆಯ ಭಾಗವಾಗಿ ಕಾಳಜಿಯ ವಿಷಯವಾಗಿರುವ ಪ್ರಕೃತಿ ಪರಿಸರದ ಬಗೆಗೆ ಇಂದಿನ ಆಧುನಿಕ ಕಾಲಘಟ್ಟದಲ್ಲಿ

ಮಾನವ ಯೋಚಿಸಬೇಕಾಗಿದೆ. ಅಷ್ಟೇ ಅಲ್ಲದೆ, ವಾಸ್ತವ ಮಾರ್ಗದಲ್ಲಿ ಬಂದ ಕಾರಂತರ ಕಾದಂಬರಿಗಳಲ್ಲಿ ಚೋಮನದುಡಿಯಿಂದ ಪ್ರಾರಂಭಗೊಂಡು, ಅವರ ಬಹುತೇಕ ಎಲ್ಲಾ ಕಾದಂಬರಿಗಳಲ್ಲಿ ಗುರುತಿಸಬಹುದಾದ್ದು ನಿಸರ್ಗ ಮತ್ತು ಮನುಷ್ಯನ ಸಂಬಂಧ ಮುಖ್ಯವಾಗುತ್ತದೆ.

ಕಾರಂತರು ತಮ್ಮ ಕಾದಂಬರಿಗಳಲ್ಲಿ ಮಾನವನನ್ನು ಗಾಢವಾಗಿ ಶೋಧಿಸಿ ಅರ್ಥ ಮಾಡಿಕೊಳ್ಳುವ ನೆಲೆಯಲ್ಲಿ, ವಿಭಿನ್ನ ಚಿಂತನೆಯ ಚೌಕಟ್ಟಿನೊಳಗೆ ಮನುಷ್ಯ ನಿಸರ್ಗ ಸಂಬಂಧಗಳ ವಿಚಾರಗಳನ್ನು ಹೇಳಿದ್ದಾರೆ. ಅವರ ಮೂಕಜ್ಜಿಯ ಕನಸುಗಳು, ಸ್ವಪ್ನದ ಹೊಳೆ, ಮೈಮನಗಳ ಸುಳಿಯಲ್ಲಿ, ಅಳಿದ ಮೇಲೆ, ಇನ್ನು ಅನೇಕ ಕಾದಂಬರಿಳಲ್ಲಿ ವರ್ತಮಾನಕ್ಕಿಂತ ಹೆಚ್ಚಿನ ಕಾಲದ ವ್ಯಾಪ್ತಿಯ ಹಿನ್ನೆಲೆಯಲ್ಲಿ ಮನುಷ್ಯನನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವಿದ್ದರೆ, ಅವರ ಮರಳಿ ಮಣ್ಣಿಗೆ , ಬೆಟ್ಟದ ಜೀವ, ಚಿಗುರಿದ ಕನಸುವಿನಂತಹ ಕಾದಂಬರಿಗಳಲ್ಲಿ ನಿರ್ಧಿಷ್ಟ ಕಾಲದ, ಪ್ರದೇಶದ ಚೌಕಟ್ಟಿನ ಮೂಲಕ ಜೀವನವನ್ನು, ಮನುಷ್ಯನ ಸ್ವಭಾವ ಮತ್ತು ಸಮಾಜವನ್ನು, ಮೌಲ್ಯಗಳನ್ನು ಶೋಧಿಸುವ ಇನ್ನೊಂದು ನೆಲೆಯ ಪ್ರಯತ್ನ ಇಲ್ಲಿದೆ. ಈ ಎರಡನೇ ಚೌಕಟ್ಟಿನ ಒಳಗೆ ನಿಸರ್ಗ ಮತ್ತು ಮನುಷ್ಯ ಸಂಬಂಧದಲ್ಲಿನ ಹೋರಾಟ ಮತ್ತು ಸಾಮರಸ್ಯ ಎರಡೂ ಇರುವ ಮಾನವನ ಬದುಕಿನ ಸ್ಥಿತಿಯನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ಶಿವರಾಮ ಕಾರಂತರ 'ಸಂಚಾರದ ಹವ್ಯಾಸ' ಎಲ್ಲರಿಗೂ ಗೊತ್ತಿದೆ. ರಾಷ್ಟ್ರಕವಿ ಕುವೆಂಪುರವರು ಹೇಳುವ ವಿಶ್ವಮಾನವ ಪ್ರಜ್ಞೆಯನ್ನು, ಶಿವರಾಮ ಕಾರಂತರು ಬಿತ್ತರಿಸಿರುವ 'ಸಂಚಾರ ಪ್ರಜ್ಞೆ'ಯನ್ನು ಕನ್ನಡ ಸಂಸ್ಕೃತಿಯ ವಿಶಿಷ್ಟ ವಿಚಾರಗಳೆನ್ನಬಹುದು. ಶಿವರಾಮ ಕಾರಂತರು ಎಲ್ಲಿದ್ದರೂ 'ಕಾರಂತರೇ' ಎಂಬುದಕ್ಕೆ ಅವರು ವಿದೇಶ ಪ್ರವಾಸದ ಸಂದರ್ಭದಲ್ಲಿ ನಡೆದ ಒಂದು ನಿದರ್ಶನವನ್ನು ಗಮನಿಸಬಹುದು. ಆಫಘಾನಿಸ್ಥಾನ ಪ್ರವಾಸದಲ್ಲಿದ್ದಾಗ ಅಲ್ಲಿನ ಮಾರ್ಗದರ್ಶಿಯು ಮೀನು ಶಿಕಾರಿಗೆ ಬಳಸುವ ಜಲಚರ ಪಕ್ಷಿಯ ಹೆಸರು ನೆನಪಿಗೆ ಬರದೆ ಚಡಪಡಿಸುತ್ತಿರುತ್ತಾನೆ. ಆಗ ಕಾರಂತರು ಆ ಪಕ್ಷಿಯ ಹೆಸರು 'ಕಾರ್ಮೋರಾಂಟ್' ಎಂದು ತಟ್ಟನೆ ಹೇಳಿಬಿಡುತ್ತಾರೆ. ಈ ಜಲಚರ ಪಕ್ಷಿಯ ಕೊರಳಿಗೆ ಒಂದು ಉಂಗುರವನ್ನು ತೊಡಿಸಲು ಜಪಾನೀಯರು ಅದಕ್ಕೆ ಮೀನು ಹಿಡಿದು ಕೊಡುವ ತರಬೇತಿ ಕೊಟ್ಟಿರುತ್ತಾರೆ. ಉಂಗುರದಿಂದಾಗಿ ದೊಡ್ಡ ಗ್ರಾತ್ರದ ಮೀನುಗಳನ್ನು ಜಠರಕ್ಕೆ ಕಳುಹಿಸಲಾಗಿದೆ. ತನ್ನ ಒಡೆಯನ ಬಳಿಗೆ ಹಿಂದಿರುಗಿ ಬರುವ 'ಕಾರ್ಮೋಕಾಂಟ್ ಮೀನು ಶಿಕಾರಿ' ಜಪಾನ್ ದೇಶದಲ್ಲಿ ಪ್ರಚಲಿತವಾಗಿದೆ. ಇದನ್ನು

ಬಲ್ಲ ಕಾರಂತರು ಜಪಾನಿನ ಮಾರ್ಗದರ್ಶಿಗೆ ಆ ಪಕ್ಷಿಯ ಹೆಸರು ನೆನಪಿಸಿಕೊಟ್ಟು ತಮ್ಮ ವಿಸ್ತಾರವಾದ ಪರಿಸರದ ಬಗೆಗಿನ ನೈಜ ಕಾಳಜಿಯನ್ನು ಬಿಂಬಿಸಿದ್ದಾರೆ. ಇದೊಂದು ಸಣ್ಣ ನಿದರ್ಶನ ಮಾತ್ರ ! ಇಂತಹ ಅನೇಕ ನಿದರ್ಶನಗಳನ್ನು ನೀಡಬಹುದು. ಒಂದು ಅಗುಳಿನಿಂದ ಅನ್ನದ ಪರೀಕ್ಷೆಯಾಗುವಂತೆ, ಈ ಒಂದು ಸಣ್ಣ ನಿದರ್ಶನದಿಂದ ಕಾರಂತರ 'ಬಹುಜ್ಞತೆ'ಯನ್ನು ಅರಿತುಕೊಳ್ಳಬಹುದು.

'ಬೆಟ್ಟದ ಜೀವ' ಕಾದಂಬರಿಯಲ್ಲಿ "ಕಾಟಿಗಳ ಉಪದ್ರ" ಎಂಬ ಮಾತು ಬರುತ್ತದೆ. ಕಾಟಿ, ಪ್ರತ್ಯಕ್ಷವಾಗಿಯೋ ಅಥವಾ ಚಿತ್ರದ ಮೂಲಕವೋ ಕಂಡಂಥ ಸಹೃದಯರಿಗೆ ಅವುಗಳ ಸ್ಮೃತಿ ಚಿತ್ರ ಮನದಲ್ಲಿ ಮೂಡುತ್ತದೆ. ಕಾಟಿ, ದುಡ್ಡುಗಳ ಸ್ಮೃತಿಚಿತ್ರವೊಂದು ಓದುಗರ ಮನದಲ್ಲಿ ಮೂಡುವುದು ಅತ್ಯಗತ್ಯವೆಂದು ನಾನಿಲ್ಲಿ ಪ್ರತಿಪಾದಿಸುತ್ತಿಲ್ಲ. ಆದರೆ, ಕಥನಕ್ಕೆ ಹಿನ್ನೆಲೆಯಾಗಿರುವ ಸಾಮಾಜಿಕ ಪರಿಸರ ಮತ್ತು ಸ್ಥಳೀಯ ಭೂಗೋಳದ ವಿವರಗಳು ಶಾಬ್ದಿಕ ಕಥನವೊಂದು ಓದುಗರ ಅನುಭವದಲ್ಲಿ ಪುನರ್‌ಸೃಷ್ಟಿಯಾಗಲು ಅಗತ್ಯವಾದ ಪರಿಕರಗಳಾಗಿರುತ್ತವೆಯೆಂದು ನಾನು ನಂಬಿದ್ದೇನೆ. ಈ ದೃಷ್ಟಿಯಿಂದ ಕುವೆಂಪು ಮತ್ತು ಕಾರಂತರ ಕಾದಂಬರಿಗಳನ್ನೋದುವ ಸಹೃದಯರಿಗೆ ಮಲೆನಾಡು ಮತ್ತು ಕರಾವಳಿ ಬದುಕಿನ ಪ್ರತ್ಯಕ್ಷ ಜ್ಞಾನವು ಅತ್ಯಗತ್ಯವಾಗಿದೆ.

18–19 ನೇ ಶತಮಾನದಲ್ಲಿ ಮನುಷ್ಯ–ನಿಸರ್ಗ ಸಂಬಂಧ ಅಧ್ಯಯನ ಮಹತ್ವದ ಕಾಳಜಿಯಾಗಿತ್ತು. ಪ್ರಕೃತಿ ಮತ್ತು ಮನುಷ್ಯನ ಬಗೆಗೆ ಆಧುನಿಕ ವಿಜ್ಞಾನಗಳು ಹುಟ್ಟಿಸಿದ ಹೊಸ ಅರಿವು ಕಾರಂತರ ವಿಚಾರ ದೃಷ್ಟಿಯನ್ನು ಪ್ರಬಲವಾಗಿ ರೂಪಿಸಿದೆ. ಅವರು ಬರೆದ 'ನಾಗರಿಕತೆಯ ಹೊಸ್ತಿಲಲ್ಲಿ' ಗ್ರಂಥ, ಮೂಕಜ್ಜಿಯ ಕನಸುಗಳು, ಕಾದಂಬರಿ, ಇತರ ವಿಜ್ಞಾನ ವಿಷಯದ ಗ್ರಂಥಗಳು, ಇವೆಲ್ಲ ಒಂದು ರೀತಿಯಲ್ಲಿ ಅಂತಹ ಚಿಂತನೆಗಳ ಆಕರಗಳಾಗಿವೆ. ಆಧುನಿಕ ಪ್ರಾಕೃತಿಕ ವಿಜ್ಞಾನಗಳು ಮುಂದಿಟ್ಟಿರುವ ವಿಚಾರಗಳು, ಇಂದ್ರೀಯ ಅನುಭವ ಪ್ರಮಾಣ್ಯತೆಯಲ್ಲಿ ಸತ್ಯದ ಶೋಧನೆಯ ವಿಧಾನ, ಇವು ಕಾರಂತರ ಚಿಂತನೆಯಾಗಿದ್ದವು.

ನಿಸರ್ಗದೊಂದಿಗಿನ ಸಂಬಂಧ ಎಲ್ಲಾ ಜೀವಿಗಳಿಗಿರುವಂತೆ ಮನುಷ್ಯ ಕೂಡ ಆದಿ ಮಾನವನ ಕಾಲದಿಂದಲೂ ನಿಸರ್ಗದೊಂದಿಗೆ ನಿರಂತರವಾಗಿ ಹೋರಾಡುತ್ತಾ ಅದರ ಒಂದು ಭಾಗವಾಗಿ ಜೀವಿಸಬೇಕಾಗಿರುವುದು ಅಷ್ಟೇ ಅಲ್ಲದೇ ಅದರೊಂದಿಗೆ ಹೊಂದಿಕೊಂಡು ಸಾಮರಸ್ಯವನ್ನು ಸಾಧಿಸಿ ಜೀವಿಸುವ ಅಗತ್ಯವು ಮಾನವನಿಗಿದೆ. ಮಾನವನ ಜೀವನ ಕ್ರಮ ಇಂದು ಖಾಸಗೀಕರಣ, ಉದಾರೀಕರಣ, ಜಾಗತೀಕರಣಗಳ ಪ್ರಭಾವದ ನಡುವೆಯೂ ನಾಗರಿಕತೆಗಳು ಬೆಳೆಯುತ್ತಾ ಹೋದಂತೆ

ನಿಸರ್ಗ ಅಥವಾ ಪ್ರಕೃತಿಯೊಂದಿಗೆ ಮನುಷ್ಯನ ಸಂಘರ್ಷವು ಹೆಚ್ಚುತ್ತದೆ. ಈ ಬಗೆಗೆ ಮನುಷ್ಯ ಎಚ್ಚರದಿಂದಿರುವಂತೆ ಕಾರಂತರು 1945ರ ಹಿಂದೆಯೇ ತಾವು ಬರೆದ 'ಬಾಳ್ವೆಯೇ ಬೆಳಕು' ಕೃತಿಯಲ್ಲಿ ವಿಚಾರಗಳನ್ನು ಮುಂದಿಟ್ಟಿದ್ದಾರೆ. ಅದೇ ಕೃತಿಯಲ್ಲಿ ಮಾನವನ ಜಗತ್ತನ್ನು ಕಾಣುವ ಬಗೆಗೆ ಸೋಶಿಯೋ ಬಯಾಲಜಿ ಮತ್ತು ಸೋಸಿಯೋ ಇಕಾಲಜಿ ಕ್ಷೇತ್ರದಲ್ಲಿ ನಡೆಯುತ್ತಿರುವ ಚರ್ಚೆಯ ತನಕವೂ ಕಾರಂತರು ವಿಚಾರ ಮಾಡಿದ್ದಾರೆ. ಇಲ್ಲಿ ಉಳಿದ ಜೀವಿಗಳೊಂದಿಗೆ ಮನುಷ್ಯನ ಸಹ ಅಸ್ತಿತ್ವದ ಪರಿಕಲ್ಪನೆ ಇದೆ. ತನ್ನ ಸುತ್ತಲಿನ ಪ್ರಕೃತಿ ಪರಿಸರ ಎಲ್ಲವನ್ನು ಮನುಷ್ಯ ಸಹಬಾಳ್ವೆಯ ದೃಷ್ಟಿಯಿಂದ ಕಾಣಬೇಕೆ ಹೊರತು ಅವುಗಳಿಗೆ ಯಜಮಾನ ಅಥವಾ ಒಡೆಯನಾಗುವ ದೃಷ್ಟಿಕೋನದಿಂದಲ್ಲ ಎಂಬುದು ಅಲ್ಲಿನ ಸಿದ್ಧಾಂತವಾಗಿದೆ. ಕಾರಂತರು 'ಇನ್ನೊಂದೆ ದಾರಿ' ಕಾದಂಬರಿಯಲ್ಲಿ ಸೋಶಿಯೋ ಬಯಾಲಜಿಯ ವಿಚಾರವನ್ನು ಪ್ರಸ್ಥಾಪಿಸಿದ್ದಾರೆ. 'ಜೀವನದ ಸುಖವನ್ನು ಕುರಿತು ಚಿಂತಿಸುವಾಗ ಯಾವತ್ತು ಜೀವಕೋಟಿಯು ಒಂದೇ ಸಮಾಜವೆನಿಸುತ್ತದೆ' ಎಂಬ ವಿಚಾರವನ್ನು ಹೇಳುವಾಗ ಕಾರಂತರು ಸಾಮಾಜಿಕ ಜೀವನದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ಮೇಲಾಟ ಹಾಗೂ ಸುತ್ತಲಿನ ಮನುಷ್ಯರು ಪರಿಸರದ ಮೇಲೆ ಪ್ರಭುತ್ವವನ್ನು ಮೆರೆಯುವ ರೀತಿಯನ್ನು ಪ್ರಶ್ನಿಸುತ್ತಾರೆ.

"ಭಾರತದಲ್ಲಿ ವಾಸಿಸುವ ನಮಗೆ ಪರಿಸರವನ್ನು ಕುರಿತ ಜ್ಞಾನ ತೀರ ಕಡಿಮೆ. ಪಶು ಪ್ರಾಣಿಗಳಿಗೂ ಮಾನವ ಬಳಗಕ್ಕೂ ಏನು ಸಂಬಂಧವಿದೆಯೆಂದು ನಮಗಿನ್ನೂ ತಿಳಿದಿಲ್ಲ. ಆದರೂ ನಾವು ಬುದ್ಧನಿಂದ ಅಹಿಂಸಾ ಧರ್ಮದ ಬೋಧನೆ ಪಡೆದವರು ! ನಮ್ಮ ಪುರಾತನ ಋಷಿಗಳು ಅತಿ ಸೂಕ್ಷ್ಮವಾದ ಜೀವಾಣುವಿನಲ್ಲಿಯೂ ಬ್ರಹ್ಮನಿದ್ದಾನೆ ಎಂದವರು. ಹೀಗೆ ಮತ ಧರ್ಮಗಳ ಪ್ರಭಾವ ನಮ್ಮ ಮೇಲೆ ವಿಪರೀತ ಬಿದ್ದುದರಿಂದಲೋ ಏನೋ ಆ ಬ್ರಹ್ಮನನ್ನು ನಾವು ನಿಸರ್ಗದಲ್ಲಿ ಕಾಣಲು ಬಯಸುವುದಿಲ್ಲ! ಕಲಿಯುಗದಲ್ಲಿ ಬ್ರಹ್ಮನ ಬದಲು ಹಣವೇ ಸರ್ವಸ್ವ ಎಂಬ ಆರಾಧನೆಗೆ ತೊಡಗಿದ್ದೇವೆ. ಪ್ರಕೃತಿ ಸಂಪತ್ತನ್ನು ನಾವು ದೈನಂದಿನ ನಮ್ಮ ಲಾಭಕ್ಕಾಗಿ ಸುಲಿಯುತ್ತಿದ್ದೇವೆಯೇ ಹೊರತು, ನಾಳಿನ ಯೋಚನೆ ನಮಗಿಲ್ಲ ಎಂಬಂತೆ ವರ್ತಿಸುತ್ತಿದ್ದೇವೆ".

ದೃಷ್ಟಿ ಇವೇ ಮುಖ್ಯವಾಗಿ ತೋಟ ಮಾಡುವುದುಕ್ಕೆ ಹೊರಟರೆ, ಚೋಮನಿಗೆ ಸಂಪ್ರದಾಯ ಬದ್ದ ಭಾರತೀಯ ಸಮಾಜ ಇಲ್ಲಿಯ ತನಕ ಒಡೆಯನಾದ ಸಂಕಪ್ಪಯ್ಯನ ಒಪ್ಪಿಗೆ ಇದ್ದರೂ ಅವನ ತಾಯಿಯ ವಿರೋಧದಿಂದ ಚೋಮ ಭೂಮಿಯ ಒಡೆತನದಿಂದ ವಂಚಿತನಾಗುತ್ತಾನೆ.

ಮೇಲಿನ ಮಾತುಗಳಲ್ಲಿ ಧರ್ಮ ಮತ್ತು ಪರಿಸರವನ್ನು ಕುರಿತು ಅತಿ ಸೂಕ್ಷ್ಮವಾದ ಪರಿಶೀಲನೆಯಿದ್ದು, ಸಿದ್ಧಾಂತಕ್ಕೂ ಆಚರಣೆಗೂ ನಡುವೆ ಇರುವ ಅಸಾಂಗತ್ಯಗಳನ್ನು ಬಯಲಿಗೆಳೆಯಲಾಗಿದೆ.

ನಗರ ಜೀವನದ ಆಕರ್ಷಣೆಯಿಂದ ಕೊಂಪೆಯಾಗಿ ಕಾಣುತ್ತಿರುವ ಹಳ್ಳಿಗಾಡುಗಳು, ಲಿಂಗಾಧಾರಿತ ಅಸಮಾನತೆಯಿಂದ ಅವಮಾನಿತರಾಗಿರುವ ಸ್ತ್ರೀ ಸಂಕುಲ, ಜನ್ಮಾಧಾರಿತ ಅಸಮಾನತೆಯಿಂದ ಅವಮಾನಿತರಾಗಿರುವ ದಲಿತರು– ಇವರನ್ನೆಲ್ಲ ಅಖಂಡವಾಗಿ ಗ್ರಹಿಸಿ, ನಿರೂಪಿಸಿರುವ ಕಾರಂತರ ಕಥನಗಳನ್ನು ವಿಮರ್ಶಿಸುವಾಗ ಬಿಡಿ ಬಿಡಿಯಾಗಿ ನೋಡಬಾರದು. ಸಮಗ್ರ ದೃಷ್ಟಿಕೋನದಿಂದ ವಿಶ್ಲೇಷಿಸಬೇಕಾಗುತ್ತದೆ.

ಚೋಮನ ದುಡಿ, ಮರಳಿ ಮಣ್ಣಿಗೆ ಕಾದಂಬರಿಗಳನ್ನು ಕನ್ನಡದಲ್ಲಿ ವಿಶೇಷವಾಗಿ ಚರ್ಚಿಸಲಾಗಿದೆ. ಬಹುಶಃ ಸಾಮಾಜಿಕ ವಿಮರ್ಶೆ ಮತ್ತು ಸ್ತ್ರೀವಾದಿ ವಿಮರ್ಶೆಗಳ ರಸನೂಬೂತಿಯೂ ಇದಕ್ಕೆ ಕಾರಣವಿರಬಹುದು. ಆದರೆ, 'ಬೆಟ್ಟದ ಜೀವ' ಗೋಪಾಲಯ್ಯನವರ 'ನಿಸರ್ಗಸನ್ನಿಧಿ'ಯ ನೆಲೆ–ಬೆಲೆಗಳನ್ನು ಸೂಕ್ಷ್ಮ ಚಿಂತನೆಗೆ ಒಳಪಡಿಸಿಲ್ಲ.

'ಇರುವುದೆಲ್ಲವ ಬಿಟ್ಟು ಇರದುರೆಡೆಗೆ ತುಡಿವುದೇ ವಿಮರ್ಶೆ' ಎಂಬಂತೆ ನಮ್ಮ ಬಹುಮಂದಿ ವಿಮರ್ಶಕರು ಬೆಟ್ಟದ ಜೀವ ಕಾದಂಬರಿಯ ಶಂಭುವಿನ ಬಗ್ಗೆ ಹೆಚ್ಚು ಚಿಂತನ–ಮಂಥನ ನಡೆಸಿದ್ದಾರೆ. ನಮ್ಮ ಕಣ್ಣಿಗೆ, ಗೋಪಾಲಯ್ಯ–ಶಂಕರಮ್ಮ–ಶಂಭು ಎಂಬ ತ್ರಿಕೋನಕ್ಕಿಂತಲೂ ಗೋಪಾಲಯ್ಯ–ಶಂಕರಮ್ಮ–ನಿರೂಪಕ ಶಿವರಾಮಯ್ಯ ಎಂಬ ತ್ರಿಕೋನ ಬಹು ಮುಖ್ಯವೆನಿಸುತ್ತದೆ.

ಕಾರಂತರ ಬಹುತೇಕ ಕಾದಂಬರಿಗಳು ಮಾನವ ನಿಸರ್ಗದೊಂದಿಗೆ ಹೊಂದಿರುವ ವ್ಯವಹಾರಿಕ ಸಂಬಂಧಗಳ ಜೊತೆಗೆ ಮಾನವ ಸಂಬಂಧಗಳು ಅನಾವರಣಗೊಳ್ಳುವ ಬಗೆಯನ್ನು ವಾಸ್ತವ ನೆಲೆಗಟ್ಟಿನಲ್ಲಿ ನಿರ್ವಚಿಸುತ್ತವೆ.

**ಕೊನೆ ಟಿಪ್ಪಣಿ:**

1. ಚೋಮನದುಡಿ, ಶಿವರಾಮ ಕಾರಂತ.
2. ನಾಗರೀಕತೆಯ ಹೊಸ್ತಿಲಲ್ಲಿ, ಶಿವರಾಮ ಕಾರಂತ.
3. ಬಾಳ್ವೆಯೇ ಬೆಳಕು, ಶಿವರಾಮ ಕಾರಂತ.
4. ಇನ್ನೊಂದೇ ದಾರಿ, ಶಿವರಾಮ ಕಾರಂತ.
5. ಬೆಟ್ಟದ ಜೀವ, ಶಿವರಾಮ ಕಾರಂತ.